# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ | 986 |
| ಸದಸ್ಯರ ಹೆಸರು | ಶ್ರೀ ಮುನಿರಾಜುಗೌಡು ಪಿ.ಎಂ. (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 24-02-2023 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಾವಯವ ಕೃಷಿಗೆ ಒಳಪಟ್ಟಿರುವ ಒಟ್ಟು ಕೃಷಿ ಭೂಮಿ ಎಷ್ಟು; | ರಾಜ್ಯದಲ್ಲಿ 'ಸಾವಯವ ಕೃಷಿ'ಗೆ ಒಳಪಟ್ಟಿರುವ ಕೃಷಿ ಭೂಮಿಯ ವಿಸ್ತೀರ್ಣವು APEDA (Agricultural and Processed Food Products Export Development Authority) ಅಂಕಿ ಅಂಶಗಳನ್ವಯ 1,10,703 ಹೆಕ್ಟೇರ್ (wild harvest ವಿಸ್ತೀರ್ಣ 14,514 ಹೆಕ್ಟೇರ್ ಸೇರಿದಂತೆ) ಇರುತ್ತದೆ. |
| ಆ) | ಸಾವಯವ ಕೃಷಿ ಉತ್ತೇಜನಕ್ಕೆ ಇರುವ ಯೋಜನೆಗಳು ಯಾವುವು; ಸದರಿ ಯೋಜನೆಗೆ ಕಳೆದ ಐದು ವರ್ಷಗಳಲ್ಲಿ ಸರ್ಕಾರ ಮಾಡಿದ ವೆಚ್ಚವೆಷ್ಟು; | ಸಾವಯವ ಕೃಷಿ ಉತ್ತೇಜನಕ್ಕೆ ಇರುವ ಯೋಜನೆಗಳು:<br>1. ಮಾರುಕಟ್ಟೆ ಆಧಾರಿತ ನಿರ್ದಿಷ್ಟ ಸಾವಯವ ಬೆಳೆ ಕ್ಲಸ್ಟರ್‌ಗಳ ಅಭಿವೃದ್ಧಿ ಕಾರ್ಯಕ್ರಮ.<br>2. ಸಾವಯವ ಕೃಷಿ ಮತ್ತು ದೃಢೀಕರಣ ಕಾರ್ಯಕ್ರಮ.<br>3. ಸಾವಯವ ಮತ್ತು ಸಿರಿಧಾನ್ಯ ಉತ್ಪನ್ನಗಳ ಮಾರುಕಟ್ಟೆ ಅಭಿವೃದ್ಧಿ ಕಾರ್ಯಕ್ರಮ.<br>4. ನೈಸರ್ಗಿಕ ಕೃಷಿ ಕಾರ್ಯಕ್ರಮ.<br>5. ರೈತಸಿರಿ ಯೋಜನೆ.<br>6. ಸಾವಯವ ಕೃಷಿ, ಸಿರಿಧಾನ್ಯ ಮತ್ತು ನೈಸರ್ಗಿಕ ಕೃಷಿ ಉತ್ಪನ್ನಗಳ ಸಂಸ್ಕರಣೆಗೆ ಉತ್ತೇಜನಾ ಕಾರ್ಯಕ್ರಮ<br>7. ಸಾವಯವ ಸಿರಿ ಯೋಜನೆ.<br>8. ಸಾವಯವ ಇಂಗಾಲ ಹೆಚ್ಚಿಸುವ ಅಭಿಯಾನ<br>ಸದರಿ ಯೋಜನೆಗಳಡಿ ಕಳೆದ ಐದು ವರ್ಷಗಳಲ್ಲಿ ಎಲ್ಲಾ ಒಟ್ಟು ರೂ.228.80 ಕೋಟಿಗಳ ವೆಚ್ಚ ಭರಿಸಿದ್ದು ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ. |
| ಇ) | ಸಾವಯವ ಕೃಷಿ ಮಾಡಲು ಆಸಕ್ತ ರೈತರಿಗೆ ತರಬೇತಿ ನೀಡಲು ಕೃಷಿ ಇಲಾಖೆ ಕೈಗೊಂಡ ಕ್ರಮಗಳೇನು; | ರಾಜ್ಯವು 2004 ರಲ್ಲಿಯೇ ಸಾವಯವ ಕೃಷಿ ನೀತಿಯನ್ನು ಹೊರತಂದು ಹಲವಾರು ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ್ದು, ಎಲ್ಲಾ ಕಾರ್ಯಕ್ರಮಗಳಡಿ ಒಟ್ಟಾರೆ 5326 ತರಬೇತಿಗಳನ್ನು ರೈತರಿಗೆ ಆಯೋಜಿಸಲಾಗಿರುತ್ತದೆ.<br>ಪ್ರಸ್ತುತ ಸಾವಯವ ಸಿರಿ ಯೋಜನೆಯಡಿ ಜಿಲ್ಲಾ ಮಟ್ಟದಲ್ಲಿ ಅರ್ಹ ಆಸಕ್ತ ರೈತರಿಗೆ ಸಾವಯವ ಕೃಷಿಯಲ್ಲಿ ಸಾಮಾರ್ಥ್ಯಾಭಿವೃದ್ಧಿ ತರಬೇತಿಗಳನ್ನು ಜಿಲ್ಲೆಗಳಲ್ಲಿ ಆಯ್ಕೆಯಾದ ನೋಂದಾಯಿತ 25 ಸಾಮಾಜಿಕ ಸಂಸ್ಥೆಗಳ ಮುಖಾಂತರ ನೀಡಲಾಗುತ್ತಿದೆ. |

<table>
<tr>
<td>ಈ)</td>
<td>ಪರಂಪರಾಗತ್ ಕೃಷಿ ಯೋಜನೆಯನ್ನು ಯಾವಾಗ ಜಾರಿಗೆ ತರಲಾಗಿದೆ; ಸದರಿ ಯೋಜನೆಗೆ ಸರ್ಕಾರ ಬಿಡುಗಡೆ ಮಾಡಿದ ಅನುದಾನವೆಷ್ಟು; (ವರ್ಷಾವಾರು ವಿವರ ನೀಡುವುದು)</td>
<td>ಕೇಂದ್ರ ಸರ್ಕಾರದ ಪರಂಪರಾಗತ ಕೃಷಿ ವಿಕಾಸ ಯೋಜನೆ (ಪಿ.ಕೆ.ವಿ.ವೈ)ಯನ್ನು ರಾಜ್ಯದಲ್ಲಿ 2015-16 ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗಿದೆ.<br><br>2019-20 ನೇ ಸಾಲಿನಲ್ಲಿ ಸದರಿ ಯೋಜನೆಯನ್ನು ತೋಟಗಾರಿಕೆ ಇಲಾಖೆಗೆ ಹಸ್ತಾಂತರಿಸಲಾಗಿರುತ್ತದೆ. ಯೋಜನೆಯಡಿ ಬಿಡುಗಡೆಯಾದ ಅನುದಾನದ ವಿವರ ಕೆಳಕಂಡಂತಿರುತ್ತದೆ.<br><br>(ರೂ.ಕೋಟಿಗಳಲ್ಲಿ)
<table>
<tr><th>ವರ್ಷ</th><th>ಕೇಂದ್ರ ಸರ್ಕಾರ</th><th>ರಾಜ್ಯ ಸರ್ಕಾರ</th><th>ಒಟ್ಟು</th></tr>
<tr><td>2015-16</td><td>19.45</td><td>12.96</td><td>32.41</td></tr>
<tr><td>2016-17</td><td>8.15</td><td>5.43</td><td>13.58</td></tr>
<tr><td>2017-18</td><td>10.88</td><td>7.25</td><td>18.13</td></tr>
<tr><td>2018-19</td><td>1.91</td><td>1.27</td><td>3.18</td></tr>
<tr><td>ಒಟ್ಟು</td><td>40.39</td><td>26.91</td><td>67.30</td></tr>
</table>
</td>
</tr>
<tr>
<td>ಉ)</td>
<td>"ಸಾವಯವ ಸಿರಿ" ಯೋಜನೆಗೆ ವಾರ್ಷಿಕವಾಗಿ ಸರ್ಕಾರ ಮಾಡುತ್ತಿರುವ ವೆಚ್ಚವೆಷ್ಟು?</td>
<td>2021-22 ನೇ ಸಾಲಿನಲ್ಲಿ "ಸಾವಯವ ಸಿರಿ" ಯೋಜನೆಗೆ ರೂ.31.22 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.</td>
</tr>
</table>

ಸಂಖ್ಯೆ: AGRI/39/ACT/2023

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

## ಅನುಬಂಧ-1

(ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ-986) ಸಾವಯವ ಕೃಷಿಯಡಿ 2017-18 ರಿಂದ 2021-22 ರ ವರೆಗಿನ ವೆಚ್ಚದ ವಿವರ

(ರೂ.ಕೋಟಿಗಳಲ್ಲಿ)

| ಕ್ರ.ಸಂ | ಕಾರ್ಯಕ್ರಮಗಳು | 2017-18 | 2018-19 | 2019-20 | 2020-21 | 2021-22 | ಎಲ್ಲಾ ಒಟ್ಟು |
|---|---|---|---|---|---|---|---|
| 1 | ಮಾರುಕಟ್ಟೆ ಬೇಡಿಕೆ ಆಧಾರಿತ ಸಾವಯವ ನಿರ್ದಿಷ್ಟ ಬೆಳೆ ಕ್ಲಸ್ಟರ್ ಅಭಿವೃದ್ಧಿ ಕಾರ್ಯಕ್ರಮ | 39.32 | 14.40 | - | - | - | **53.72** |
| 2 | ಸಾವಯವ ಕೃಷಿ ಅಳವಡಿಕೆ ಮತ್ತು ಪ್ರಮಾಣೀಕರಣ ಕಾರ್ಯಕ್ರಮ | - | 10.29 | 26.75 | - | - | **37.04** |
| 3 | ಮಾರುಕಟ್ಟೆ ಸಂಬಂಧಿತ ಚಟುವಟಿಕೆಗಳು ಮತ್ತು ಸಾವಯವ ಕೃಷಿ ಮತ್ತು ಸಿರಿಧಾನ್ಯಗಳಿಗೆ ಸಂಬಂಧಿಸಿದಂತೆ ಪ್ರಚಾರ ಮತ್ತು ಗ್ರಾಹಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ (ವಸ್ತು ಪ್ರದರ್ಶನ, ಉತ್ಪಾದಕರ- ಮಾರುಕಟ್ಟೆದಾರರ ಸಮಾವೇಶ, ಮೇಳ, ಮುದ್ರಿಕೆ, ಜಾಹೀರಾತು, ಕಾರ್ಯಾಗಾರ, ಇತ್ಯಾದಿ) | - | 11.90 | 2.46 | - | - | **14.36** |
| 4 | ನೈಸರ್ಗಿಕ ಕೃಷಿ ಕಾರ್ಯಕ್ರಮ | - | 19.74 | 26.56 | 4.99 | 4.00 | **55.29** |
| 5 | ರೈತ ಸಿರಿ ಯೋಜನೆ | - | - | 12.88 | 4.22 | 12.26 | **29.36** |
| 6 | ಸಾವಯವ ಕೃಷಿ ಮತ್ತು ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಉತ್ಪನ್ನಗಳ ಸಂಸ್ಕರಣೆಗೆ ಸಹಾಯಧನ | - | - | 1.00 | - | - | **1.00** |
| 7 | ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮಗಳಾದ ಸಾವಯವ ಸಿರಿ ಯೋಜನೆ ಅನುಷ್ಠಾನ ಮತ್ತು ಆಡಳಿತಾತ್ಮಕ ವೆಚ್ಚಗಳು | - | - | - | - | 33.12 | **33.12** |
| 8 | ಸಾವಯವ ಇಂಗಾಲ ಹೆಚ್ಚಿಸುವ ಅಭಿಯಾನ | - | - | - | - | 4.91 | **4.91** |
| | **ಒಟ್ಟು** | **39.32** | **56.34** | **69.66** | **9.21** | **54.29** | **228.80** |